ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.2827/2021

ಸಿ .ಡಬ್ಲ್ಯೂ :2

ಪಿ .ಡಬ್ಲ್ಯೂ :2

ಸಾಕ್ಷಿಯನ್ನು ದಿಃ 15-01-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಪ್ರಸ್ತುತ ಗುಬ್ಬಿಯ ವಿನಾಯಕ ನಗರ ಮನೆಯೊಂದರಲ್ಲಿ ವಾಸಿಸುತ್ತಿದ್ದೇನೆ . 2021 ನೇ ಸಾಲಿನಲ್ಲಿ ಗುಬ್ಬಿಯ ಮಾರುತಿ ನಗರದಲ್ಲಿ ವಾಸವಿದ್ದೆ .ಚಾಸಾ -1 ರವರು ಆನಂದ್ ಪ್ರಸಾದ್ ರವರ ಪತ್ನಿಯೆಂದು ಮತ್ತು ನಾನು ಅವರ ಮಗಳೆಂದು ತೋರಿಸಲು ಪೊಲೀಸರಿಗೆ ಯಾವುದೇ ದಾಖಲೆ ನೀಡಿಲ್ಲ . ರಾಜೇಶ್ ರವರು ಆನಂದ್ ಪ್ರಸಾದ್ ರವರ ಮಗ ಎಂದರೆ ಸರಿ . ರಾಜೇಶ್ ರವರ ತಾಯಿಯ ಹೆಸರು ಗಂಗಮ್ಮ . ಆನಂದ್ ಪ್ರಸಾದ್ ರವರ ಮತ್ತು ಗಂಗಮ್ಮ ರವರ ಮಗಳ ಹೆಸರು ಸಹನ . ನನ್ನ ತಾಯಿ ಆನಂದ್ ಪ್ರಸಾದ್ ರವರನ್ನು ವಿವಾಹವಾಗಿದ್ದಾರೆ ಎಂದು ತೋರಿಸಲು ನಿಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ .

ನನ್ನ ತಾಯಿ ಆನಂದ್ ಪ್ರಸಾದ್ ರವರ ವಿರುದ್ಧ ಜೀವನಾಂಶವನ್ನು ಕೋರಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ . ಮೇಲೆ ಹೇಳಿದ ರಾಜೇಶ್ ಮತ್ತು ಸಹನರವರು ತುಮಕೂರಿನಲ್ಲಿ ಆನಂದ್ ಪ್ರಸಾದ್ ರವರ ಜೊತೆಯಲ್ಲಿ ವಾಸಿಸುತ್ತಿದ್ದಾರೆ . ಎಷ್ಟು ವರ್ಷಗಳಿಂದ ಅವರು ಅಲ್ಲಿ ವಾಸಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ . ಪ್ರಸ್ತುತ ಅವರು ವಾಸಿಸುತ್ತಿರುವ ವಿಳಾಸ ನನಗೆ ಗೊತ್ತಿಲ್ಲ .

ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಕಾರೇಹಳ್ಳಿ ತೋಟ ರಾಜೇಶ್ ರವರ ಹೆಸರಿನಲ್ಲಿದೆ ಅದು ಅವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ . ಆನಂದ್ ಪ್ರಸಾದ್ ಮತ್ತು ನನ್ನ ತಾಯಿ ಬೇರೆ ಬೇರೆ ಜಾತಿ ಎಂದರೆ ಸರಿ .

ಮೇಲೆ ಹೇಳಿದ ದಿನಾಂಕದಂದು ನಾನು ಮತ್ತು ನನ್ನ ತಾಯಿ ಬಸ್ಸಿನಲ್ಲಿ ತೋಟದ ಬಳಿ ಹೋಗಿದ್ದೆವು , ನನ್ನ ತಾಯಿಯ ಗೆಳತಿ ದ್ವಿ ಚಕ್ರ ವಾಹನದಲ್ಲಿ ಬಂದಿದ್ದರು . ಸದರಿ ದ್ವಿ ಚಕ್ರ ವಾಹನ ಟಿ ವಿಸ್ ಜುಪಿಟರ್ ಆಗಿತ್ತು , ಅದರ ನೋಂದಣಿ ಸಂಖ್ಯೆ ಗೊತ್ತಿಲ್ಲ . ಮೇಲೆ ಹೇಳಿದ ದಿನಾಂಕದಂದು ನಾವು ರಾಜೇಶ್ ರವರ ಹೆಸರಿನಲ್ಲಿರುವ ತೋಟಕ್ಕೆ ನುಗ್ಗಿ ಅಲ್ಲಿ ಬೆಳೆದಿದ್ದ ಅಡಿಕೆ ಫಸಲನ್ನು ಕತ್ತರಿಸುತ್ತಿದ್ದೆವು ಎಂದರೆ ಸರಿಯಲ್ಲ . 4 ಮತ್ತು 5 ನೇ ಆರೋಪಿತರುಗಳು ಏಕೆ ಹೀಗೆ ಮಾಡುತ್ತಿದ್ದೀರಿ

ಎಂದು ನಮ್ಮನ್ನು ಕೇಳಿದಾಗ ನಾವು ಅವರುಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದೇನೆ ಮತ್ತು ಜಾತಿ ನಿಂದನೆ ಮಾಡಿ ನಿಂದಿಸಿದ್ದೇವೆ ಎಂದರೆ ಸರಿಯಲ್ಲ. ಆ ಸಂಬಂಧ ಅವರು ಠಾಣೆಗೆ ದೂರು ನೀಡಲು ಹೋಗಿದ್ದರು , ನಾವು ದೂರು ದಾಖಲಾಗದಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ . ನಾವೆ ತೋಟಕ್ಕೆ ಹೋಗಿ ಫಸಲು ಕೀಳಲು ಪ್ರಯತ್ನಿಸಿದ್ದೇವೆಯೇ ಹೊರತು ನಾನು ಹೇಳುವಂತೆ ಆರೋಪಿತರುಗಳು ನಮ್ಮ ಮೇಲೆ ಹಲ್ಲೆ ಮಾಡಿಲ್ಲ , ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಡಿಕೆ ಕೀಳಿಸಲು ಎಷ್ಟು ಜನರನ್ನು ಕರೆದುಕೊಂಡು ಹೋಗಿದ್ದಿರಿ ಎಂದರೆ ಸಾಕ್ಷಿಯು ನಾವು ಯಾರನ್ನು ಕರೆದುಕೊಂಡು ಹೋಗಿಲ್ಲ ಎಂದು ಹೇಳಿದ್ದಾರೆ . ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕಂಡುಬರುವ ವ್ಯಕ್ತಿ ಯಾರೆಂದು ಪ್ರಶ್ನಿಸಲಾಗಿ ಅವರು ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ . ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ಮಹಿಳೆ ನನ್ನ ತಾಯಿ ಆಕೆಯ ಪಕ್ಕದಲ್ಲಿ ನಿಂತಿರುವರ ವ್ಯಕ್ತಿ ಯಾರೆಂದು ಗೊತ್ತಿಲ್ಲ , ಗಲಾಟೆ ನಡೆಯುವಾಗ ನೋಡುತ್ತಾ ನಿಂತಿದ್ದರು ಎಂದು ತಿಳಿಸಿದ್ದಾರೆ . ತೋಟದ ಪಕ್ಕದಲ್ಲಿರುವ ರಸ್ತೆಯಲ್ಲಿ ನನ್ನ ತಾಯಿ ಕುಳಿತಿದ್ದಾರೆ ಎಂದರೆ ಸರಿ . (ಚರ್ಚೆಯ ಅನುಕೂಲತೆಗಾಗಿ ಭಾವ ಚಿತ್ರವನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ ) .ಪೊಲೀಸರು ನನ್ನಿಂದ ಮತ್ತು ಮಂಜುಳ ರವರಿಂದ ಮೊಬೈಲ್ ಗಳನ್ನು ಜಪ್ತುಪಡಿಸಿಕೊಂಡಿಲ್ಲ . 1 ನೇ ಆರೋಪಿತರಿಗೆ ಅಧಿಕ ರಕ್ತದ ಒತ್ತಡದ ಕಾರಣದಿಂದ ದೇಹದ ಎಡಭಾಗಕ್ಕೆ ಪಾರ್ಶ್ವವಾಯು ಆಗಿದೆ ಎಂದರೆ ಸರಿ . ಇಂದಿಗೂ ಸಹಾ ಅವರಿಗೆ ಓಡಾಡಲು ಕಷ್ಟವಾಗುತ್ತಿದೆ , ಮಾತು ತೊದಲುತ್ತದೆ ಎಂದರೆ ಸರಿಯಲ್ಲ . ನಾನು ಹೇಳುವಂತೆ 1 ನೇ ಆರೋಪಿತರು ಶೂ ನಿಂದ ನನ್ನ ತಾಯಿಯ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರಿ ಇಲ್ಲದಿದ್ದರೂ ಸಹಾ ಆರೋಪಿತರುಗಳಿಗೆ ಸೇರಿದ ತೋಟಕ್ಕೆ ನುಗ್ಗಿ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸರ್ಕಾರಿ ದಾಖಲೆಗಳಲ್ಲಿ ನಮ್ಮ ಜಾತಿ ಗೌಡ್ರು ಎಂದು ತೋರಿಸಲಾಗಿದೆ . 1 ನೇ ಆರೋಪಿತರು ನನ್ನ ತಾಯಿಯನ್ನು ವಿವಾಹವಾಗಿಲ್ಲ , ನಾನು 1 ನೇ ಆರೋಪಿತರ ಮಗಳಲ್ಲ , ನಮ್ಮ ಮತ್ತು ಅವರ ನಡುವೆ ಯಾವುದೇ ಸಂಬಂಧವಿಲ್ಲ , ಅವರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಅವರ ವಿರುದ್ದ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಪೊಾಲೀಸರು ಎಷ್ಟು ಗಂಟೆಗೆ ಸ್ಥಳಕ್ಕೆ ಬಂದಿದ್ದರು ಎಂದರೆ ಗೊತ್ತಿಲ್ಲ ಹೊಯ್ಸಳ ವಾಹನ ಬಂದಿತ್ತು ಎಂದು ತಿಳಿಸಿದ್ದಾರೆ . ನಾನು ಹೇಳುವಂತೆ ಸ್ಥಳಕ್ಕೆ ಯಾವುದೇ ದ್ವಿ ಚಕ್ರ

ವಾಹನ ತೆಗೆದುಕೊಂಡು ಹೋಗಿರಲಿಲ್ಲ , ಆದುದರಿಂದ ದ್ವಿ ಚಕ್ರ ವಾಹನದ ಕೀ ಯನ್ನು ಕಿತ್ತುಕೊಳ್ಳುವ ಚಕ್ರದ ಗಾಳಿ ತೆಗೆಯುವ ಪ್ರಮೇಯವೇ ಉದ್ಭವಿಸಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿತರ ವಿರುದ್ಧ ಸ್ವತ್ತಿನಲ್ಲಿ ಭಾಗಂಶ ನೀಡಬೇಕೆಂದು ಕೋರಿ ಸುಮಾರು 2-3 ತಿಂಗಳ ಹಿಂದೆ ದಾವೆಯನ್ನು ಸಲ್ಲಿಸಿದ್ದೇವೆ . ನನ್ನ ತಾಯಿ ದಾಂಪತ್ಯ ಪುನರ್ ಸ್ಥಾಪನ ಹಕ್ಕಿಗಾಗಿ ಯಾವುದೇ ಪ್ರಕರಣ ದಾಖಲಿಸಿಲ್ಲ . ಕೇವಲ ಅಕ್ರಮ ಲಾಭ ಪಡೆಯುವ ಉದ್ದೇಶಕ್ಕಾಗಿ ನನ್ನ ತಾಯಿ ಜೀವಾನಾಂಶದ ಪ್ರಕರಣ ಮತ್ತು ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ಪೊಲೀಸರು ಸ್ಥಳಕ್ಕೆ ಬಂದಾಗಲೇ ನಮ್ಮಿಂದ ದೂರು ಪಡೆದುಕೊಂಡಿದ್ದಾರೆ . ನಾನು ಮತ್ತು ನನ್ನ ತಾಯಿ ದೂರು ನೀಡಿದ್ದೇವೆ . ನಾನು ಮತ್ತು ನನ್ನ ತಾಯಿ ಸೇರಿ ಒಂದು ದೂರು ನೀಡಿದ್ದೇವೆ. ಪೊಲೀಸರು ಸ್ಥಳಕ್ಕೆ ಬಂದಾಗಲೇ ನಮ್ಮಿಂದ ವಿವರ ಪಡೆದು ದೂರು ಬರೆದುಕೊಂಡಿದ್ದಾರೆ . ನಾವು ಮಾರನೇ ದಿನ ಠಾಣೆಗೆ ಹೋಗಿ ದೂರು ನೀಡಿದ್ದೇವೆ . ಸ್ಥಳಕ್ಕೆ ಬಂದಿದ್ದ ಪೊಲೀಸರ ಹೆಸರು ಗೊತ್ತಿಲ್ಲ . ದಿಃ 05-11-2021 ರಂದು ನಾನು ಪೊಲೀಸರು ಸಮಕ್ಷಮ ಹೇಳಿಕೆ ನೀಡಿದ್ದೇನೆ . 08-11-2021 ರಂದು ಸಹಾ ಪೊಲೀಸರ ಸಮಕ್ಷಮ ಹೇಳಿಕೆ ನೀಡಿದ್ದೇನೆ. ನಾನು ಮೇಲೆ ಹೇಳಿದಂತೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ವಿವರಗಳನ್ನುಸೃಷ್ಟಿಸಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.